**Andolana**

Date: 17-11-2019 Page No: 07

Edition: Mysore Language: Kannada

# ಅಂತಾರಾಷ್ಟ್ರೀಯ ಸಮ್ಮೇಳನ ಸಮಾರೋಪ ಸಮಾರಂಭ

## ಆರ್ಥಿಕ ಅಸಮಾನತೆ ದೇಶದ ಬೆಳವಣಿಗೆಗೆ ಮಾರಕ: ಕೆ.ಆರ್.ವಿಜು ಪರಮೇಶ್ವರ್



ಮೈಸೂರು,ನ.16– ನಗರದ ಎಸ್‌ಡಿಎಂ ಐಎಂಡಿ ಕಾಲೇಜಿನಲ್ಲಿ ಶನಿವಾರ ಶೈಕ್ಷಣಿಕ ವರ್ಗ, ಎಕ್ಸೆಲಿಯಾ ಗ್ರೂಪ್, ಎಸ್‌ಡಿಎಂ ಐಎಂಡಿ ಸಹಯೋಗದಲ್ಲಿ ಆಯೋಜಿಸಿದ್ದ 'ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿ: ಉದಯೋನ್ಮುಖ ಪ್ರವೃತ್ತಿಗಳು' ವಿಷಯ ಕುರಿತ 5ನೇ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಿತು.

ಸಮಾರೋಪ ಭಾಷಣ ಮಾಡಿದ ಕ್ಲೂಬರ್ ಲುಬ್ರಿಕೇಶನ್ ಇಂಡಿಯಾ ಸಂಸ್ಥೆಯ ಮಾಜಿ ಅಧ್ಯಕ್ಷರು ಮತ್ತು ಸಿಇಒ ಕೆ.ಆರ್.ವಿಜು ಪರಮೇಶ್ವರ್ ಅವರು, ಎಲ್ಲರೂ ವ್ಯವಹಾರಗಳು ಮಾಡುವುದೇ ಲಾಭ ಗಳಿಸುವುದಕ್ಕೆ. ಆದರೆ, ಆ ಹಣ ಎಲ್ಲರ ಮಧ್ಯೆಯೂ ಸಮನಾಗಿ ಹಂಚಿಕೆಯಾಗಬೇಕು. ದೇಶದಲ್ಲಿ ಆರ್ಥಿಕ ಅಸಮಾನತೆ ಇದ್ದರೆ ಅದು ಬೆಳವಣಿಗೆಗೆ ಮಾರಕ ಅಂಶ ಎಂದು ಅಭಿಪ್ರಾಯಪಟ್ಟರು.

ಸಮ್ಮೇಳನವನ್ನು ನ.15ರಂದು ಫ್ರಾನ್ಸ್‌ನ ಲಾ ರೋಶೆಲ್ಲೆ ಬಿಸಿನೆಸ್ ಸ್ಕೂಲ್‌ನ ನಿರ್ದೇಶಕ ಡಾ.ಸೆಬಾಸ್ಟಿಯನ್ ಚಾಂಟೆಲಟ್ ಉದ್ಘಾಟಿಸಿದ್ದರು. 2 ದಿನಗಳ ಕಾಲ ಸಮ್ಮೇಳನದಲ್ಲಿ ಆರ್ಥಿಕತೆಯ ಬಗ್ಗೆ ವಿವಿಧ ಆರ್ಥಿಕ ತಜ್ಞರು ಉಪನ್ಯಾಸ ನೀಡಿದ್ದರು. ಸಮ್ಮೇಳನದ ವಿಷಯ ಕುರಿತು 140ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ಮತ್ತು ನಿದರ್ಶನಾ ಲೇಖನಗಳನ್ನು ಪ್ರಸ್ತುತಪಡಿಸಲಾಯಿತು.

ಕಾಲೇಜಿನ ಪ್ರಾಧ್ಯಾಪಕರಾದ ಡಾ.ಎಚ್.ಗಾಯತ್ರಿ, ಡಾ.ಬಿ.ವೆಂಕಟರಾಜ, ಡಾ.ಎಂ.ಆರ್.ಸುರೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.